# ದಿ ಸಿಟಿಜನ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ

ನಂ.651/ಎ, 'ಡಿ' ಬ್ಲಾಕ್ 2ನೇ ಹಂತ, 1ನೇ ಮುಖ್ಯರಸ್ತೆ,
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010.

## ಚಿನ್ನದ ಒಡವೆ ಮೇಲೆ ಕೊಡುವ ಸಾಲದ ಅರ್ಜಿ

### ನಿಬಂಧನೆ ಮತ್ತು ಷರತ್ತುಗಳು

1. ಅರ್ಜಿದಾರರು ಬ್ಯಾಂಕಿನ ಸದಸ್ಯರಾಗಿರಬೇಕು ಅಲ್ಲದೆ ಬ್ಯಾಂಕಿನಲ್ಲಿ ಚಾಲ್ತಿ ಅಥವಾ ಉಳಿತಾಯ ಖಾತೆಯನ್ನು ತೆರೆದಿರಬೇಕು.
2. ಅರ್ಜಿಯನ್ನು ಪೂರ್ಣವಾದ ವಿವರಗಳೊಂದಿಗೆ ಸ್ಪಷ್ಟವಾಗಿ ಭರ್ತಿ ಮಾಡಬೇಕು.
3. ಒತ್ತೆ ಇಡುವ ವಸ್ತುಗಳನ್ನು ಅರ್ಜಿಯ ಜೊತೆಯಲ್ಲಿಯೇ ಖುದ್ದಾಗಿ ಕೊಡಬೇಕು.
4. ಅರ್ಜಿಯನ್ನು ಒಪ್ಪಿಕೊಂಡರೆ ವಸ್ತುಗಳ ಬೆಲೆಯನ್ನು ಕಟ್ಟಲು ಬ್ಯಾಂಕಿನಿಂದ ನೇಮಿಸಲ್ಪಟ್ಟಿರುವ ಮೌಲ್ಯನಿರ್ಣಯಕರಾರಿಗೆ ಕಳುಹಿಸಿಕೊಡಲಾಗುವುದು.
5. ಕೊಡತಕ್ಕ ಮುಂಗಡ ಹಣವನ್ನು ಮ್ಯಾನೇಜರ್‌ರವರು ನಿರ್ಣಯಿಸುವರು. ಹೆಚ್ಚಿನ ಅಥವಾ ಉಚ್ಚತರ ಮೊತ್ತಕ್ಕೆ ಬರುವ ಕೇಳಿಕೆಗಳನ್ನು ಪುರಸ್ಕರಿಸುವುದಿಲ್ಲ.
6. ಒಡವೆಗಳನ್ನು ಚೀಲದಲ್ಲಿಟ್ಟು ಮೊಹರು ಮಾಡಲಾಗುವುದು, ಅವುಗಳನ್ನು ಭಾಗಶಃ ತೆಗೆದುಕೊಳ್ಳಲು ಬರುವುದಿಲ್ಲ. ಆದರೆ ಅವುಗಳನ್ನು ಪೂರ್ತಾ ಸಾಲವನ್ನು ಮರುಪಾವತಿ ಮಾಡಿದ ಮೇಲೆ ವಾಪಸ್ಸು ಕೊಡಲಾಗುವುದು.
7. ಸಾಲವನ್ನು ಮರುಪಾವತಿ ಮಾಡುವ ಗರಿಷ್ಟ ಅವಧಿ ಹನ್ನೆರಡು ತಿಂಗಳು ಮಾತ್ರ. ಈ ಅವಧಿಯೊಳಗೆ ಸಾಲ ಪಡೆದವರು ಬಡ್ಡಿ ಸಮೇತ ಪೂರ್ತಾ ಸಾಲ ಮರುಪಾವತಿಗೆ ಏರ್ಪಾಟು ಮಾಡಬೇಕು. ಅದರೆ ಅರ್ಹವಾದ ಸಂದರ್ಭದಲ್ಲಿ ಬ್ಯಾಂಕಿನವರು ಸಾಲವನ್ನು ಇನ್ನೂ ಹನ್ನೆರಡು ತಿಂಗಳವರೆಗೆ ಮಾತ್ರ ನವೀಕರಿಸಬಹುದು.
8. ಸಾಲ ಪಡೆದವರು ಸಾಲದ ಲೆಕ್ಕವನ್ನು ಚುಕ್ತ ಮಾಡಿ ಅವರಿಗೆ ಕೊಟ್ಟಿರುವ ರಸೀತಿಯನ್ನು ಹಿಂದಿರುಗಿಸಿದ ನಂತರ ಅವರ ವಸ್ತುಗಳನ್ನು ವಾಪಸ್ಸು ಮಾಡಲಾಗುವುದು.
9. ಹನ್ನೆರಡು ತಿಂಗಳ ವಾಯಿದೆಯೊಳಗೆ ಸಾಲ ಪಡೆದವರು, ಸಾಲ ಚುಕ್ತ ಮಾಡಲು ತಪ್ಪಿದರೆ ಅಥವಾ ಮೇಲೆ ಹೇಳಿರುವ ರೀತಿ ಸಾಲ ನವೀಕರಿಸಲು ಏರ್ಪಾಟು ಮಾಡದಿದ್ದರೆ, ಗಡವು ತಾರೀಖಿನಿಂದ ಬಾಕಿ ಇರುವ ಸಾಲವನ್ನು ಅವಧಿ ಮೀರಿದ ಸಾಲವಾಗಿ ಪರಿಗಣಿಸಿ ಶೇ 2% ದಂಡದ ಬಡ್ಡಿಯನ್ನು ಶೇ.......% ಬಡ್ಡಿಯ ಜೊತೆಗೆ ವಿಧಿಸಲಾಗುವುದು.
10. ಯಾವುದೇ ಅರ್ಜಿಯನ್ನಾಗಲೀ ಒಪ್ಪುವುದು ಅಥವಾ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವುದು ಮತ್ತು ಯಾವ ನಿಬಂಧನೆ ಅಥವಾ ಷರತ್ತುಗಳನ್ನು ಬದಲಾಯಿಸುವ ಮತ್ತು ವಿಧಿಸುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ.
11. ಅಸಲು + ಬಡ್ಡಿಯನ್ನು ಪ್ರತಿ ತಿಂಗಳು ಪಾವತಿ ಮಾಡಬೇಕು.

ವಿ. ಸೂ. :- ನಾನು ಮೇಲ್ಕಂಡ ನಿಯಮಗಳನ್ನು ಓದಿದ್ದೇನೆ ಮತ್ತು ಎಲ್ಲಾ ಷರತ್ತುಗಳನ್ನು ಒಪ್ಪಿದ್ದೇನೆ. ನಾನು ಪ್ರತಿ ತಿಂಗಳು ಬಡ್ಡಿಯನ್ನು ನಗದಾಗಿಯಾಗಲೀ ಅಥವಾ ನನ್ನ ಉಳಿತಾಯ ಖಾತೆಯಿಂದ ವರ್ಗಾವಣೆ ಮೂಲಕವಾಗಲಿ ಕೊಡಲು ಒಪ್ಪಿದ್ದೇನೆ.

ಸಾಲಪಡೆಯುವವರ ರುಜು

ಮೌಲ್ಯಗಾರರಿಗೆ ನಿಬಂಧನೆ : 1. ಭದ್ರತೆ    2. ಅವಧಿ    3. ಶುಲ್ಕ

# ದಿ ಸಿಟಿಜನ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ

ನಂ.651/ಎ, 'ಡಿ' ಬ್ಲಾಕ್ 2ನೇ ಹಂತ, 1ನೇ ಮುಖ್ಯರಸ್ತೆ, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010.

## ಚಿನ್ನಾಭರಣಗಳ ಮೇಲೆ ಸಾಲದ ಮಂಜೂರಾತಿಗಾಗಿ ಅರ್ಜಿ

ಸದಸ್ಯತ್ವದ ನಂ. ...................... ಸಾಲದ ಖಾತೆ ನಂ.................

ಉಳಿತಾಯ ಖಾತೆ ನಂ...................

ನನ್ನ ಚಿನ್ನದ ಆಭರಣಮೇಲೆ ಸಾಲವನ್ನು ಹನ್ನೆರಡು ತಿಂಗಳೊಳಗೆ ವಾಪಸ್ಸು ಮಾಡುವ .................................... ರೂ. (ಅಕ್ಷರದಲ್ಲಿ ........................................................................................)ಗಳ ಸಾಲವನ್ನು ಮಂಜೂರು ಮಾಡಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇವೆ. ಆಭರಣಗಳ ವಿವರಗಳನ್ನು ಈ ಕೆಳಕಂಡಂತೆ ಕೊಡಲಾಗಿದೆ.

---

1. ಎ. ಹೆಸರು (ಅನಕ್ಷರಸ್ಥರಾದರೆ ಪೋಟೊ)
   ಬಿ. ಸದಸ್ಯತ್ವದ ಸಂಖ್ಯೆ .....

2. ತಂದೆಯ ಅಥವಾ ಗಂಡನ ಹೆಸರು .....

3. ವಾರಸುದಾರರ ಹೆಸರು / ವಯಸ್ಸು / ಸಂಬಂಧ .....

4. ವಾಸಸ್ಥಳ ಮತ್ತು ವಿಳಾಸ, ದೂರವಾಣಿ ನಂ. .....

5. ಉದ್ಯೋಗದ ವಿಳಾಸ, ದೂರವಾಣಿ ನಂ. ಮತ್ತು ವಾರ್ಷಿಕ ಆದಾಯ .....

6. ಸಾಲದ ಉದ್ದೇಶ .....

7. ಆಭರಣಗಳ ವಿವರಣೆ :

| | |
|---|---|
| 1) | 6) |
| 2) | 7) |
| 3) | 8) |
| 4) | 9) |
| 5) | 10) |

(ಆಭರಣಗಳು ಏನಾದರೂ ಗುರುತು ಹೊಂದಿದ್ದರೆ ಅಥವಾ ಹರಳುಗಳನ್ನು ಅದ್ದಿದ್ದರೆ ತಿಳಿಸಿ)

8. ಒಟ್ಟು ತೂಕ ಗ್ರಾಂಗಳಲ್ಲಿ ......

ಮೇಲ್ಕಂಡ ಆಭರಣಗಳು ನನ್ನ ಸ್ವಂತ ಆಸ್ತಿ ಮತ್ತು ಇವುಗಳ ಮೇಲೆ ಬೇರೆ ಯಾರಿಗೂ ಹಕ್ಕಿರುವುದಿಲ್ಲ ಎಂದು ಪ್ರಮಾಣ ಮಾಡುತ್ತೇನೆ. ಮೇಲ್ಕಂಡ ವಿವರಗಳು ಸತ್ಯವಾಗಿದೆ ಮತ್ತು ಈಗಿನ ಮತ್ತು ಮುಂದೆ ಮಾಡಬಹುದಾದ ಎಲ್ಲಾ ನಿಯಮಗಳಿಗೂ ಬದ್ಧವಾಗಿರುತ್ತೇನೆಂದು ಘೋಷಿಸುತ್ತೇನೆ. ನನ್ನಿಂದ ಬ್ಯಾಂಕಿಗೆ ಏನಾದರೂ ನಷ್ಟವಾದರೆ ಮತ್ತು ನಾನೇನಾದರೂ ತಪ್ಪು ಹೇಳಿಕೆ ಕೊಟ್ಟಿದ್ದರೆ ಬ್ಯಾಂಕಿಗೆ ಕ್ಷತಿರ್ಮಾ (ನನ್ನಿಂದ ಏನಾದರೂ ನಷ್ಟವಾದರೆ ನಾನು ಬ್ಯಾಂಕಿಗೆ ಇನ್‌ಡೆಮ್ನಿಫೈ) ಮಾಡಿಕೊಡುತ್ತೇನೆ ಎಂದು ಧೃಡವಿಶ್ವಾಸದಿಂದ ಒಪ್ಪಿದ್ದೇನೆ. ಒತ್ತೆ ಇಟ್ಟಿರುವ ಚಿನ್ನದ ಆಭರಣಗಳನ್ನು "ಚಿನ್ನ ನಿಯಂತ್ರಿತ ಕಾನೂನು 1968 ಪ್ರಕಾರ ಘೋಷಿಸಬೇಕಾಗಿಲ್ಲವೆಂದು ಪ್ರಮಾಣವಾಗಿ ಹೇಳುತ್ತೇನೆ."

ಅರ್ಜಿದಾರನ / ಳ ರುಜು

ತಾರೀಖು :

ವಾರಸುದಾರರ ಸಹಿ

# ಒತ್ತೆ ಮತ್ತು ಕರಾರು ಕಾಗದ

ವ್ಯವಸ್ಥಾಪಕರಿಗೆ,
ದಿ ಸಿಟಿಜನ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ
ನಂ.651/ಎ, 'ಡಿ' ಬ್ಲಾಕ್ 2ನೇ ಹಂತ, 1ನೇ ಮುಖ್ಯರಸ್ತೆ,
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ,
ಬೆಂಗಳೂರು – 560 010.

ತಾರೀಖು : ..................................

ಸ್ವಾಮಿ,

ನಾನು ಬರೆದು ಕೊಟ್ಟಿರುವ ಪ್ರಾಮಿಸರಿ ನೋಟಿನಲ್ಲಿ ಕಂಡ ಮೊಬಲಗು ರೂ.................................................. ಮತ್ತು ಅದಕ್ಕೆ ಆಗುವ ಬಡ್ಡಿಯನ್ನು ವಾಪಸ್ಸು ಕೊಡುವ ಬಗ್ಗೆ ನನ್ನ ಹೆಸರಿನಲ್ಲಿರುವ ಗ್ರಾಂಗಳಲ್ಲಿ, ತೂಕವಿರುವ (ಚಿನ್ನದ ಮೌಲ್ಯಮಾಪಕರು ನಗದಿ ಪಡಿಸುವ ಬೆಲೆ ರೂ. ..............................) ಸತ್ಯಾಂಶವಾಗಿರುವ ಪಟ್ಟಿಯಲ್ಲಿರುವ ಆಭರಣಗಳನ್ನು ಹಣದ ಭದ್ರತೆಗಾಗಿ ಕೊಟ್ಟಿರುವುದನ್ನು ದಯವಿಟ್ಟು ತೆಗೆದುಕೊಳ್ಳಬೇಕು. ಬ್ಯಾಂಕಿನವರು ಸಾಲ ಮರುವಾವತಿಗೆ ಒತ್ತಾಯಮಾಡಿದಾಗ ನಾನೇನಾದರೂ ಸಾಲದ ಹಣವನ್ನು ಬಡ್ಡಿ ಸಮೇತ ವಾಪಸ್ಸು ಮಾಡಲು ತಪ್ಪಿದರೆ ಈ ಹಣದ ಭದ್ರತೆಗೆ ಇಟ್ಟಿರುವ ಆಭರಣಗಳನ್ನು ಖಾಸಗಿ ಮಾರಾಟ ಮಾಡಿಯಾಗಲಿ ಅಥವಾ ಬಹಿರಂಗ ಹರಜಿನಲ್ಲಾಗಲಿ ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾದ ಬಾಕಿ ಹಣಕ್ಕೆ ಜಮಾ ಮಾಡಿಕೊಳ್ಳಬಹುದೆಂದು ನಾನು ಬ್ಯಾಂಕಿನವರಿಗೆ ಪ್ರಾಧಿಕಾರ ಕೊಟ್ಟಿರುತ್ತೇನೆ. ನಾನು ಕೊನೆಯಲ್ಲಿ ರಿಜಿಸ್ಟರ್ ಮಾಡಿಸಿರುವ ವಿಳಾಸಕ್ಕೆ ಒತ್ತಾಯದ ನೋಟಿಸನ್ನು ಟಪಾಲಿನಲ್ಲಿ ಕಳುಹಿಸಿದರೆ ಸಾಕು ಅದು ನನಗೆ ತಲುಪದಿದ್ದರೂ ನಾನು ಬ್ಯಾಂಕಿನಲ್ಲಿ ಒತ್ತೆ ಇಟ್ಟಿರುವ ಆಭರಣಗಳ ಮಾರಾಟದ ರೀತಿಯ ಬಗ್ಗೆ ಯಾವ ವಿಧವಾದ ಆಕ್ಷೇಪಣೆಯನ್ನು ಕೈಗೊಳ್ಳುವುದಿಲ್ಲವೆಂದು ಭರವಸೆ ನೀಡುತ್ತೇನೆ ಮತ್ತು ಮಾರಾಟದ ಅಕ್ರಮತೆಯ ಆಧಾರದ ಮೇಲೆ ಉಂಟಾಗುವ ಯಾವ ವಿಧವಾದ ನಷ್ಟಕ್ಕೂ ಬ್ಯಾಂಕಿನವರ ಮೇಲೆ ದಾವ ಹೂಡಲು ಅಧಿಕಾರವಿರುವುದಿಲ್ಲ. ಏನಾದರೂ. ಹೆಚ್ಚಿನ ಹಣ ಬ್ಯಾಂಕಿನವರಲ್ಲಿ ಉಳಿದರೆ ಅಂತಹ ಸಂದರ್ಭದಲ್ಲಿ ನನ್ನ ಇತರೆ ಯಾವ ವಿಧವಾದ ಬಾಕಿ ಸಾಲಗಳಿಗೆ ಜಮಾ ಮಾಡಿಕೊಳ್ಳಲು ನಿಮ್ಮ ಪೂರ್ಣ ವಿಮೋಚನೆಗೆ ಬಿಡಲಾಗಿದೆ. ಅಂತಹ ಎಲ್ಲಾ ಬಾಕಿಗಳಿಗೂ ನಿಮಗೆ ಏಕಮಾತ್ರ ಮತ್ತು ಪರಮ ಧರಣಾಧಿಕಾರವಿರುತ್ತದೆ. ಒತ್ತೆ ಇಟ್ಟಿರುವ ಆಭರಣಗಳು ಶುದ್ಧವಾದ ಚಿನ್ನವೆಂದು ಮತ್ತು ಅವುಗಳು ನನಗೆ ಸೇರಿದುವೆಂದು ಮತ್ತು ಅವುಗಳ ಮೇಲೆ ಯಾರಿಗೂ ಧಾರಣಾಧಿಕಾರವಿಲ್ಲವೆಂದು ನಾನು ಘೋಷಿಸುತ್ತೇನೆ. ಹಣದ ಭದ್ರತೆಗಾಗಿ ಬ್ಯಾಂಕಿನಲ್ಲಿ ಇಟ್ಟಿರುವ ಹಾಗೂ ಮೇಲೆ ಉಲ್ಲೇಖಿತವಾಗಿರುವ ಒಡವೆಗಳ ಪಟ್ಟಿ ಈ ರೀತಿ ಇದೆ.

| ಕ್ರ. ಸಂ. | ವಿವರ | ತೂಕ | ಬೆಲೆ |
|---|---|---|---|
| 1. | .................................. | .................................. | .................................. |
| 2. | .................................. | .................................. | .................................. |
| 3. | .................................. | .................................. | .................................. |
| 4. | .................................. | .................................. | .................................. |
| 5. | .................................. | .................................. | .................................. |
| 6. | .................................. | .................................. | .................................. |
| 7. | .................................. | .................................. | .................................. |

ಸಾಲ ಪಡೆಯುವರ ರುಜು

---

## ಆಭರಣಗಳನ್ನು ಹಿಂದಕ್ಕೆ ಪಡೆದ ಸ್ವೀಕೃತ ಪತ್ರ

ಶ್ರೀಮತಿ/ಶ್ರೀ.................................................................................. ಆಭರಣ ಸಾಲದ ಖಾತೆ ಸಂಖ್ಯೆ ..................................................
ಆದ ನಾನು ಅಕ್ಕಸಾಲಿಗರು ವಿವರಿಸಿರುವ ಚಿನ್ನದ ಆಭರಣಗಳನ್ನು ಅಡವಿಟ್ಟಿದ್ದು. ಸಾಲ ಮರುಪಾವತಿ ಆಗಿರುವುದರಿಂದ, ಅವುಗಳನ್ನು ದಿನಾಂಕ................................ ರಲ್ಲಿ ಯಾವುದೇ ಬಾಕಿ ಇಲ್ಲದಂತೆ ಯಥಸ್ಥಿತಿಯಲ್ಲಿಯೇ ವಾಪಸ್ ಪಡೆದಿರುತ್ತೇನೆ.

ಸಾಲಗಾರರ /ಅಡವುದಾರರ ಸಹಿ

ಅಡವಿನ ಆಭರಣಗಳನ್ನು ದಿನಾಂಕ........................................ ರಂದು ಸಾಲಗರರಿಗೆ ಹಿಂದಿರುಗಿಸಲಾಗಿದೆ.

ತಾ॥

ಸಹಾಯಕ ವ್ಯವಸ್ಥಾಪಕರು/ವ್ಯವಸ್ಥಾಪಕರು